RNU AIR DHARWAD

# JANUARY 10, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;** 'ಕೃಷಿ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ' ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ, ಚಾಲನೆ.
- **ಇಂಧನ ಇಲಾಖೆಯಿಂದ,** 2 ಲಕ್ಷ 50 ಸಾವಿರ ರೈತರ ಪಂಪ್‌ಸೆಟ್‌ಗಳು, ಸಕ್ರಮ.
- **ಹೆಗ್ಗೋಡಿನ ಚರಕ ಸಂಸ್ಥೆಯಿಂದ,** ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ, ಮೂರು ದಿನಗಳ, ಖಾದಿ ಕೈ ಮಗ್ಗ ಮೇಳಕ್ಕೆ, ಇಂದು ಚಾಲನೆ.
- **ಕೊಡವ ಕುಟುಂಬಗಳ ಹಾಕಿ ಪಂದ್ಯ;** ಕುಂಡ್ಯೋಳಂಡ ಕುಟುಂಬಕ್ಕೆ, 1 ಕೋಟಿ ರೂಪಾಯಿ ಅನುದಾನ.

<><><>

**ಹೆಚ್ಚುತ್ತಿರುವ ಜನಸಂಖ್ಯೆಗೆ** ಭವಿ ್ಯದಲ್ಲಿ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ ಒದಗಿಸಲು, ಸಕ್ಷಮ ಕೃಷಿ 'ಸ್ಮಾರ್ಟ್ ಅಗ್ರಿಕಲ್ಚರ್' ಅಳವಡಿಸಿಕೊಳ್ಳಬೇಕಿದೆ ಎಂದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಎಸ್. ವಿ. ಸುರೇಶ ಹೇಳಿದ್ದಾರೆ. 'ಕೃಷಿ ಮತ್ತು ಕೃಷಿ ಅವಲಂಬಿತ ವಿಸ್ತರಣಾ ಚಟುವಟಿಕೆಗಳಲ್ಲಿ, ಕೃತಕ ಬುದ್ಧಿಮತ್ತೆಯ ಬಳಕೆ' ಕುರಿತು, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಆಯೋಜಿತ, ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಮುಖ್ಯ ಅಥಿತಿ, ಭಾರತೀಯ ಕೃಷಿ ಅನುಸಂಧಾನ ಪರಿ ್ತಿನ ವಿಸ್ತರಣಾ ವಿಭಾಗದ ಸಹಾಯಕ ಮಹಾ ನಿರ್ದೇಶಕ ಆರ್. ರಾಯ್ ಬರ್ಮನ್ ಅವರು

ಮಾತನಾಡಿ, ಕೃಷಿ ದತ್ತಾಂಶಗಳನ್ನು ಆಧರಿಸಿ ಅಭಿವೃದ್ಧಿ ಪಡಿಸಿದ, ಕೃತಕ ಬುದ್ಧಿಮತ್ತೆಯ ಬಳಕೆಯ ಬಗ್ಗೆ ತಿಳಿಸಿದರು.

<><><>

**ಮರೆತು ಹೋದ, ಭಾರತೀಯ ಆಹಾರ ಪದ್ಧತಿಗಳನ್ನು** ಪುನರ್ ಪರಿಚಯಿಸಿ, ದೇಸಿ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿಸಲು, ರಾಜ್ಯ ಸರ್ಕಾರ ಒತ್ತು ನೀಡುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಸಚಿವರು, ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸಲು, ಈ ತಿಂಗಳ 23 ರಿಂದ 25ರ ವರಗೆ, ಬೆಂಗಳೂರಿನ ಅರಮನೆ ಮೈದಾನದಲ್ಲಿ, ಅಂತಾರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳ ಆಯೋಜಿಸಲಾಗಿದೆ ಎಂದರು.

<><><>

**ಕಳೆದ ಒಂದೂವರೆ ವ ್ಷದಲ್ಲಿ,** ರೈತರ 2 ಲಕ್ಷ 50 ಸಾವಿರ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ಮುಂಬರುವ ಒಂದು ವರ್ಷದೊಳಗೆ, ಎಲ್ಲ ಪಂಪ್‌ಸೆಟ್ ಸಕ್ರಮಗೊಳಿಸಲಾಗುವುದು ಎಂದು, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಚಿವರು ಸಭೆ ನಡೆಸಿದರು. ರಾಜ್ಯ ಸರ್ಕಾರದ ಸಬ್ಸಿಡಿಯನ್ನು ಶೇಕಡ 50ಕ್ಕೆ ಹೆಚ್ಚಿಸಲಾಗಿದೆ. ಕೇಂದ್ರ ಸರ್ಕಾರ ಶೇಕಡ 30 ರ ್ಟು ಸಬ್ಸಿಡಿ ನೀಡುತ್ತಿದ್ದು, ರೈತರು ಶೇಕಡ 20 ರ ್ಟು ಮೊತ್ತ ಭರಿಸಿದರೆ ಸಾಕು ಎಂದರು. ಮುಂಬರುವ ಬೇಸಿಗೆಗೆ, ರಾಜ್ಯದಲ್ಲಿ 19 ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ನಿರೀಕ್ಷಿಸಲಾಗಿದೆ. ಹೆಚ್ಚು ವಿದ್ಯುತ್ ಉತ್ಪಾದನೆ, ದೀರ್ಘಾವಧಿ ಖರೀದಿ ಒಪ್ಪಂದದ ಮೂಲಕ, ಅಗತ್ಯ ವಿದ್ಯುತ್ ಪೂರೈಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

<><><>

**ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು ಹೆಗ್ಗೋಡಿನ,** ಹೊನ್ನೇಸರದ, ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ, ಇಂದಿನಿಂದ 3 ದಿನಗಳ ವರೆಗೆ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯ ವರೆಗೆ, 'ಕೊಡು ಕೊಳ್ಳುವವರ ಖಾದಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳ' ಆಯೋಜಿಸಿದೆ. ಹೆಗ್ಗೋಡಿನ ಕವಿ–ಕಾವ್ಯ ಟ್ರಸ್ಟ್ ಹಾಗೂ ದೇಸಿ ಟ್ರಸ್ಟ್ ಆಯೋಜಿಸಿರುವ, ಕೈಮಗ್ಗ ಉತ್ಪನ್ನಗಳ ಪ್ರದರ್ಶನಕ್ಕೆ, ರಾಜ್ಯ ಕ್ರಾಫ್ಟ್ ಕೌನ್ಸಿಲ್ ಕಾರ್ಯಕಾರಿ ಸಮಿತಿ ಸದಸ್ಯೆ ಚಂದ್ರಾ ಜೈನ್, ಇಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡಲಿದ್ದಾರೆ. ಚರಕ ಸಂಸ್ಥಾಪಕ ಹಾಗೂ ರಂಗಕರ್ಮಿ ಪ್ರಸನ್ನ ಪಾಲ್ಗೊಳ್ಳಲಿದ್ದಾರೆ.

<><><>

**ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಚರಕದ ವಿನ್ಯಾಸ ವಿಭಾಗದ ಮುಖ್ಯಸ್ಥೆ, ಪದ್ಮಶ್ರೀ.

<><><>

**ಹೊಸ ದಿಲ್ಲಿಯ ಕೇಂದ್ರ ಸಂಸ್ಕೃತಿ** ಸಚಿವಾಲಯದ ಸಹಯೋಗದಲ್ಲಿ, ಶಿವಮೊಗ್ಗದ ಶ್ರೀ ವಿಜಯ ಕಲಾನಿಕೇತನ ಸಂಸ್ಥೆ, ಪವಿತ್ರಾಂಗಣದಲ್ಲಿ, ವಿಶಿಷ್ಟವಾದ ರಾಷ್ಟ್ರೀಯ ನೃತ್ಯ ಕಾರ್ಯಕ್ರಮಗಳನ್ನು ನಾಲ್ಕು ದಿನಗಳ ಕಾಲ ಆಯೋಜಿಸಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ನೃತ್ಯ ತರಂಗ ಸಾಂಸ್ಕೃತಿಕ ಹಬ್ಬದ ನಿರ್ದೇಶಕಿ ಹಾಗೂ ಖ್ಯಾತ ಮನೋ ಆರೋಗ್ಯ ವೈದ್ಯೆ ಡಾಕ್ಟರ್ ಕೆ.ಎಸ್.ಪವಿತ್ರಾ.

<><><>

**ಸ್ವಚ್ಛ ಭಾರತ ಮಿಷನ್** ಮತ್ತು ಹದಿನೈದನೇ ಹಣಕಾಸು ಯೋಜನೆಯಡಿ, ದಾವಣಗೆರೆಯಲ್ಲಿ ನಿರ್ಮಾಣಗೊಂಡ, ದೇಶದ ಮೂರನೇ ಸ್ವಚ್ಛ ಗೃಹ ಕಲಿಕಾ ಕೇಂದ್ರವನ್ನು, ಸಂಸದರಾದ ಪ್ರಭಾ ಮಲ್ಲಿಕಾರ್ಜುನ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಜೆ.ಎಚ್.ಪಟೇಲ್ ಬಡಾವಣೆಯಲ್ಲಿ, ಅಂದಾಜು 1 ಕೋಟಿ 6 ಲಕ್ಷ ರೂಪಾಯಿ ವೆಚ್ಚದಲ್ಲಿ, ಸ್ವಚ್ಛ ಗೃಹ ಕಲಿಕಾ ಕೇಂದ್ರ ನಿರ್ಮಾಣಗೊಂಡಿದೆ. ಆಂಧ್ರ ಪ್ರದೇಶ ಹಾಗೂ ಬೆಂಗಳೂರು ಹೊರತು ಪಡಿಸಿ, ದಾವಣಗೆರೆಯಲ್ಲಿ ಈ ಕೇಂದ್ರ ಸ್ಥಾಪನೆಯಾಗಿದೆ ಎಂದರು.

<><><>

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ** ಅಭಿಯಾನದಡಿ, ಮಹಿಳೆಯರು, ರೈತರ ಸಬಲೀಕರಣಕ್ಕಾಗಿ, ಗಮನಾರ್ಹ ಕೆಲಸ ಮಾಡುತ್ತಿರುವ, ರಾಜ್ಯದ 12 ಜನ ಕೃಷಿ ಮತ್ತು ಪಶು ಸಖಿಯರಿಗೆ, ಹೊಸ ದಿಲ್ಲಿಯ ಈ ಬಾರಿಯ ಗಣರಾಜ್ಯೋತ್ಸವದಲ್ಲಿ, ಪಾಲ್ಗೊಳ್ಳಲು ಕೇಂದ್ರ ಸರ್ಕಾರ, ವಿಶೇಷವಾಗಿ ಆಹ್ವಾನಿಸಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲೂಕು ಆನೂರು ಗ್ರಾಮದ, ಕೃಷಿ ಸಖಿ ಲಾವಣ್ಯಾ ಸಹ ಪಾಲ್ಗೊಳ್ಳಲಿದ್ದಾರೆ. ಆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಂಟು ಗ್ರಾಮಗಳಲ್ಲಿ ಕೃಷಿ ಸಖಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಲಾವಣ್ಯಾ ಪದವಿಧರೆ. 2019 ರಿಂದ ಅವರು ಕೃಷಿ ಸಖಿಯಾಗಿ, ಕಾರ್ಯನಿರ್ವಹಿಸುತ್ತಿದ್ದಾರೆ.

<><><>

**ಕೊಡಗಿನಲ್ಲಿ ಪ್ರತಿ ವರ್ಷ**, ಕುಂಡ್ಯೋಳಂಡ ಕೊಡವ ಕುಟುಂಬದ ವತಿಯಿಂದ ನಡೆಯುವ, ಹಾಕಿ ಪಂದ್ಯಾವಳಿ, ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿರುವುದು, ಹೆಮ್ಮೆಯ ವಿಷಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ಲಾಘಿಸಿದ್ದಾರೆ. ಗೃಹ ಕಚೇರಿ ಕೃಷ್ಣದಲ್ಲಿ, ಹಾಕಿ ಪಂದ್ಯಾವಳಿ ಸಂಘಟಿಸಲು, ಕುಂಡ್ಯೋಳಂಡ ಕೊಡವ ಕುಟುಂಬಕ್ಕೆ, 1 ಕೋಟಿ ರೂಪಾಯಿ ಚೆಕ್ ಅನ್ನು, ಯುವ ಸಬಲೀಕರಣ ಇಲಾಖೆ ವತಿಯಿಂದ, ನೀಡಿ ಅವರು ಮಾತನಾಡಿದರು. ಕಳೆದ ವರ್ಷ ಕೊಡವ ಹಾಕಿ ಕ್ರೀಡಾಕೂಟದಲ್ಲಿ 360 ತಂಡಗಳು, 4 ಸಾವಿರದ 800 ಕ್ರೀಡಾಪಟುಗಳು ಭಾಗವಹಿಸಿದ್ದರು.

<><><>

**ಈ ಮಧ್ಯೆ, ಕೊಡಗು ಜಿಲ್ಲೆ ಸರ್ವೋದಯ** ಸಮಿತಿ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿಯವರು, ಗಾಂಧಿ ಸ್ಮಾರಕದ ಅಭಿವೃದ್ಧಿಗೆ, 60 ಲಕ್ಷ ರೂಪಾಯಿ ಮಂಜೂರು ಮಾಡುವ ಭರವಸೆ ನೀಡಿದ್ದಾರೆ.

<><><>

**ಹೊಸ ದಿಲ್ಲಿಯ ಗಣರಾಜ್ಯೋತ್ಸವ** ಕವಾಯತಿನಲ್ಲಿ ಪಾಲ್ಗೊಳ್ಳಲಿರುವ ದೇಶದ ವಿವಿಧ ರಾಜ್ಯಗಳ ಎನ್.ಸಿ.ಸಿ. ಶಿಬಿರಾರ್ಥಿಗಳನ್ನು, ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಭೇಟಿ ಮಾಡಿ, ಗೌರವ ವಂದನೆ ಸ್ವೀಕರಿಸಿದರು.

<><><>

**ಬೆಂಗಳೂರಿನ ಮಾಣಿಕ್ ಾ ಕವಾಯತು** ಮೈದಾನದಲ್ಲಿ, ಭಾರತೀಯ ಸೇನೆ ನಾಳೆ ಶನಿವಾರ, “ನಿಮ್ಮ ಸೇನೆಯ ಬಗ್ಗೆ ತಿಳಿಯಿರಿ” ಮೇಳ ಆಯೋಜಿಸಿದೆ.

<><><>

**ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ,** ಇಂದು ಬೆಳಗ್ಗೆ 10 ಗಂಟೆಗೆ, ಧಾರವಾಡದ ಲಿಂಗಾಯತ ಟೌನ್‌ಹಾಲ್‌ನಲ್ಲಿ, ತ್ಯಾಗವೀರ ಶ್ರೀ ಶಿರಸಂಗಿ ಲಿಂಗರಾಜರ 164ನೇ ಜಯಂತಿ ಉತ್ಸವ ಆಯೋಜಿಸಿದೆ.

<><><>

**ಕಲಬುರಗಿ ವಿಭಾಗ ಮಟ್ಟದ, “ಕಾಲೇಜು ರಂಗೋತ್ಸವ”,** ರಾಯಚೂರು ಜಿಲ್ಲೆಯ ಸಿಂಧನೂರಿನ, ಟೌನ್‌ಹಾಲ್ ನಲ್ಲಿ, ಇಂದಿನಿಂದ ಮೂರು ದಿನ ಜರುಗಲಿದೆ.

<><><>

**ದಕ್ಷಿಣ ಭಾರತ ಹಾಗೂ ಕನ್ನಡದ** ಹೆಸರಾಂತ ಚಲನಚಿತ್ರ ನಟ, ಜಿ.ಕಿಶೋರ ಕುಮಾರ, 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ.

<><><>

**ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ** ಜ್ಯೋತಿ ರಥ ಯಾತ್ರೆ, ಬೆಳಗಾವಿ ಜಿಲ್ಲೆ ಚಿಕ್ಕೋಡಿಗೆ ಆಗಮಿಸಿದೆ.

<><><>

**‘ನಮ್ಮ ಸಂವಿಧಾನ ನಮ್ಮ ಹೆಮ್ಮೆ ಅಭಿಯಾನ’ ಕ್ಕೆ,** ಬೆಂಗಳೂರಿನ ರಾಜ್ಯ ಬಿಜೆಪಿ ಕಚೇರಿಯಲ್ಲಿ, ಕೇಂದ್ರ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.

<><><>

**ಗದಗ ಜಿಲ್ಲೆ, ಬಿಂಕದಕಟ್ಟಿ** ಗ್ರಾಮದ ಮೃಗಾಲಯ, ಮಕರ ಸಂಕ್ರಾಂತಿ ಪ್ರಯುಕ್ತ, ಮಂಗಳವಾರ 14 ರಂದು, ಸಾರ್ವಜನಿಕ ವೀಕ್ಷಣೆಗೆ ತೆರೆದಿರಲಿದೆ.

<><><>

**ಶಿವಮೊಗ್ಗದ ತ್ಯಾವರೆಕೊಪ್ಪ** ಹುಲಿ ಮತ್ತು ಸಿಂಹ ಧಾಮದ, ಹುಲಿ ಅಂಜನಿ ಅನಾರೋಗ್ಯದಿಂದ ಮೃತಪಟ್ಟಿದೆ ಎಂದು, ಮೃಗಾಲಯದ ನಿರ್ದೇಶಕ ಅಮರಾಕ್ಷರ ತಿಳಿಸಿದ್ದಾರೆ. ಮೃಗಾಲಯದ ಹೆಣ್ಣು ಹುಲಿಗಳ ಸಂಖ್ಯೆ 4ಕ್ಕೆ ಇಳಿಕೆಯಾಗಿದೆ.

<><><>

- **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;** ‘ಕೃಷಿ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ’ ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ, ಚಾಲನೆ.
- **ಇಂಧನ ಇಲಾಖೆಯಿಂದ,** 2 ಲಕ್ಷ 50 ಸಾವಿರ ರೈತರ ಪಂಪ್‌ಸೆಟ್‌ಗಳು, ಸಕ್ರಮ.
- **ಹೆಗ್ಗೋಡಿನ ಚರಕ ಸಂಸ್ಥೆಯಿಂದ,** ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ, ಮೂರು ದಿನಗಳ, ಖಾದಿ ಕೈ ಮಗ್ಗ ಮೇಳಕ್ಕೆ, ಇಂದು ಚಾಲನೆ.
- **ಕೊಡವ ಕುಟುಂಬಗಳ ಹಾಕಿ ಪಂದ್ಯ;** ಕುಂಡ್ಯೋಳಂಡ ಕುಟುಂಬಕ್ಕೆ, 1 ಕೋಟಿ ರೂಪಾಯಿ ಅನುದಾನ.

<><><>